ದ್ರಾಕ್ಷಿ ಔಷಧಿ ನಕಲಿ

242 (546) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :– ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೋಲ್ಹಾರ, ಬಳೂಲೆ, ಕುಬಕಡ್ಡಿ ಇನ್ನೂ ತಾಲ್ಲೂಕಿನ ಹಲವಾರು ಗ್ರಾಮಗಳ ರೈತರು ಕದಮ್ ಟ್ರೇಡರ್ಸ್ ಡೀಲರ್ ಇವರಿಂದ ಗದಗ ಜಿಲ್ಲೆಯ ವಿನಾಯಕ ಆಗ್ರೋ ಏಜೆನ್ಸೀಸ್ ಪ್ರೈಲಿ., ಹುಲಕೋಟಿ, ಈ ಕಂಪನಿಯು ಉತ್ಪಾದಿಸಿದ ದ್ರಾಕ್ಷಿ ಬೆಳೆಯ ಔಷಧಿಯು ನಕಲಿಯಾಗಿರುವುದೆಂದು ತಿಳಿಸಿ, ಈ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎ. ರವೀಂದ್ರನಾಥ (ಮಾನ್ಯ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):

(ಅ) ಬಂದಿದೆ.

(ಆ) ಸಂಬಂಧಿತ ರೈತರಿಂದ ದೂರು ಬಂದಿದ್ದು ಈ ಬಗ್ಗೆ ವಿಜ್ಞಾನಿಗಳ ಅಭಿಪ್ರಾಯ ಕೋರಲಾಗಿದೆ. ವಿಜ್ಞಾನಿಗಳು ನೀಡುವ ವರದಿಯನ್ನನುಸರಿಸಿ ಮುಂದಿನ ಕ್ರಮ ನಿರ್ಧರಿಸಲಾಗುವುದು.

ರಸ್ತೆ ಅಭಿವೃದ್ಧಿ

243 (545) ಶ್ರೀ ಚಿಕ್ಕಣ್ಣ (ಹೆಚ್.ಡಿ. ಕೋಟೆ) :– ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮೈಸೂರು–ಮಾನಂದವಾಡಿ ರಸ್ತೆಯ ರಾ.ಹೆ–33 ರಲ್ಲಿ 9.75 ಕಿಮೀ ಉದ್ದದ ಬೈಪಾಸ್ ರಸ್ತೆಯು ದೊಮ್ಮನಕಟ್ಟೆ, ಹೊನ್ನಮ್ಮನಕಟ್ಟೆ, ನಿಶ್ನ, ಕೆ.ಆರ್. ಪುರ, ಮಗ್ಗೆ, ಮಳಲಿ, ಎನ್. ಬೆಳ್ತೂರು, ಕಾರಾಪುರ ಮಾರ್ಗ, ಉದ್ದೂರುಗೇಟ್ ಮೂಲಕ ಬಾವಲಿಗೆ ಸಂಚರಿಸುತ್ತಿರುವುದು ಗ್ರಾಮೀಣ ರಸ್ತೆಯಾಗಿದ್ದು ರಸ್ತೆ ಅಭಿವೃದ್ಧಿಯಾಗಿರುವುದಿಲ್ಲವಾದ್ದರಿಂದ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈವರೆಗೂ ಯಾವುದೇ ಕ್ರಮಕೈಗೊಳ್ಳದಿರಲು ಕಾರಣವೇನು?